ಚ್ಯುತಿಗೊಳಿಸಿರುವುದಾಗಿಯೂ, ನನ್ನ ಮಾಸಿಕ ವೇತನವನ್ನು ನಿಲ್ಲಿಸಿರುವುದಾಗಿಯೂ ಕೆಲದಿನಗಳಲ್ಲೇ ನನಗೆ ಸುದ್ದಿ ಬಂತು. ಈ ವಿಚಾರ ತಿಳಿದ ದಿವಾನರು 'ಹಾಗೆ ಮಾಡಲು ನಾನು ಬಿಡುವುದಿಲ್ಲ, ನೀವು ನಿಶ್ಚಿಂತೆಯಿಂದಿರಿ' ಎಂದು ನನಗೆ ಪತ್ರ ಬರೆದರು.

ಪಿತೃ ಸಮಾನರಾದ ಮಾವ 'ಕೊಚ್ಚ್, ನನ್ನ ಆರೋಗ್ಯ ಹದಗೆಡುತ್ತಿದೆ, ಸಾಯುವ ಮುನ್ನ ನಿನ್ನನ್ನು ನೋಡಬೇಕೆಂದಾಸೆ, ಬರುವೆಯಲ್ಲವೆ?' ಎಂದು ಹೇಳಿಕಳುಹಿಸಿದ್ದರು. ಉಕ್ಕಿಬಂದ ಕಣ್ಣೀರನ್ನು ಒರೆಸಿಕೊಳ್ಳುತ್ತಾ, ಕಿಳಿಮಾನೂರಿಗೆ ಹೋಗಿಬರಲು ನಿರ್ಧರಿಸಿದೆ. ಎಷ್ಟಾದರೂ ನನಗೆ ಕುಂಚ ಹಿಡಿಯಲು, ಬಣ್ಣ ಕಲಸಲು ಹೇಳಿಕೊಟ್ಟ ಪ್ರಥಮ ಗುರು ನನ್ನ ಸೋದರಮಾವ. ಅವರಿಲ್ಲದೆ ನಾನೆಲ್ಲಿ? ಈ ದಿನ ನನ್ನ ಔನ್ನತ್ಯವೇನಾದರೂ ಇದ್ದರೆ ಅದು ಅವರು ಹಾಕಿದ ಭಿಕ್ಷೆ. ಆದರೆ ಬೊಂಬಾಯಿಯನ್ನು ಬಿಟ್ಟುಹೋಗಲಾರದಂತಹ ಬಂಧವೊಂದು ನನಗಿತ್ತು.

ಅದು ಸುಗಂಧಾ! ಅವಳಿಲ್ಲದ ಒಂದು ಕ್ಷಣವನ್ನೂ ನಾನು ಊಹಿಸಿಕೊಳ್ಳಲಾರದಷ್ಟು ನಾನು ಅವಳನ್ನು ಹಚ್ಚಿಕೊಂಡುಬಿಟ್ಟಿದ್ದೆ. ಯಾವ ಹೆಣ್ಣು ರೂಪದರ್ಶಿಯಾಗಿ ಬಂದರೂ ವಿಚಲಿತನಾಗದ ನಿಷ್ಕಾಮ ಮನಸ್ಸಿನ ನಾನು ಅದು ಹೇಗೆ ಸುಗಂಧಳ ಪ್ರೀತಿಗೆ ಸ್ಪಂದಿಸಿದೆ ಎಂದು ನೆನೆಸಿಕೊಂಡರೆ ನನಗೇ ಅಚ್ಚರಿಯಾಗುತ್ತದೆ! ಹೌದು! ಅವಳ ಪ್ರೀತಿ ಅಂತಹ ನಿಷ್ಕಲ್ಮಶ ಪ್ರೀತಿ. ಮಗುವಿನ ಮನಸ್ಸಿನಷ್ಟು ಮುಗ್ಧ ಅವಳ ಮನಸ್ಸು. ನನ್ನ ಪತ್ನಿ ಪುರತಾರ್ಥಿಯಲ್ಲಿ ಕಾಣಸಿಗದ ನಿಸ್ವಾರ್ಥ ಪ್ರೇಮ ನಾನವಳಲ್ಲಿ ಕಂಡೆ. ಎಂತಲೇ ಅವಳನ್ನು ಹಚ್ಚಿಕೊಂಡೆ. ಒಮ್ಮೆ ಸುಗಂಧಳನ್ನು ಕೇಳಿದೆ 'ಸುಗಂಧಾ ನಾವು ಮದುವೆಯಾಗೋಣವೆ?' ಸುಗಂಧ ಕ್ಷಣ ಯೋಚಿಸಿ ಹೇಳಿದಳು. 'ಬೇಡ ರವಿ, ನಿನಗೊಂದು ಸಂಸಾರವಿದೆ, ಮುದ್ದಾದ ಮೂರು ಮಕ್ಕಳಿದ್ದಾರೆ, ನಿನ್ನನ್ನೇ ನಂಬಿರುವ ಪತ್ನಿಯಿದ್ದಾಳೆ, ಅವರೆಲ್ಲರಿಗೂ ವಂಚನೆ ಮಾಡಿ, ನೀನಿಲ್ಲಿ ನನ್ನನ್ನು ಮದುವೆಯಾಗುವುದು ಸರಿಯಲ್ಲ, ನಾನೆಂದಿದ್ದರೂ ನಿನ್ನ ರಾಧೆ. ನಿನ್ನ ನೆನಪಿನಲ್ಲೇ ಬದುಕುವವಳು. ಹೀಗೆ ಇದ್ದುಬಿಡುತ್ತೇನೆ. ನಿನ್ನ ಪತ್ನಿಯೆಂಬ ಗೌರವದ ಸ್ಥಾನ ನಿನ್ನ ಪುರತಾರ್ಥಿಗೇ ಇರಲಿ.'



ಹಣ್ಣುಗಳ ತಟ್ಟೆ ಕೈಯಲ್ಲಿ ಹಿಡಿದ ಮಹಾರಾಷ್ಟ್ರದ ಮಹಿಳೆ

ಎಂಥಾ ದೂರದೃಷ್ಟಿ ಅವಳದ್ದು! ಎಂತಹ ವಿಶಾಲ ಹೃದಯ. ಸ್ವಲ್ಪವೂ ಸ್ವಾರ್ಥವಿಲ್ಲದ ಅವಳ ವ್ಯಕ್ತಿತ್ವ, ಪುರುವಿನ ವ್ಯಕ್ತಿತ್ವಕ್ಕೆ ತದ್ವಿರುದ್ಧ. ಈರ್ಷ್ಯೆ, ಸ್ವಾರ್ಥಗಳ ಆಗರ ನನ್ನ ಪತ್ನಿ. ಅವಳೊಂದಿಗೆ ಅಷ್ಟು ವರ್ಷಗಳು ಸಂಸಾರ ನಡೆಸಿದ್ದರೂ, ಅವಳು ನನಗೆ ಮಾನಸಿಕವಾಗಿ ಹತ್ತಿರವಾಗಲೇ ಇಲ್ಲ. ಆದರೆ ಈ ಸುಗಂಧ ಅದೆಷ್ಟು ಬೇಗ ನನ್ನ ಹೃದಯದಲ್ಲಿ ಒಂದಾಗಿಬಿಟ್ಟಳು! ಈಗ ಅವಳನ್ನು ಬಿಟ್ಟುಹೋಗಬೇಕಲ್ಲಾ ಎಂದು ಪರಿತಪಿಸಿದೆ. ಸುಗಂಧಳಿಗಂತೂ ನಾನು ಕಿಳಿಮಾನೂರಿಗೆ ಹೊರಡುವ ಸುದ್ದಿ ದೊಡ್ಡ ಆಘಾತವೇ. ನನ್ನ ಜೀವನದಲ್ಲಿ ನನ್ನ ಸೋದರಮಾವನ ಪಾತ್ರವೇನೆಂದು ಅವಳಿಗೆ ತಿಳಿಸಿ ಸಮಾಧಾನ ಮಾಡಿದೆ. ಬೇಗ ಬರುವುದಾಗಿ ಆಶ್ವಾಸನೆ ನೀಡಿದೆ. ಆ ದಿನವೇ ಚಿತ್ರಪಟಗಳನ್ನೆಲ್ಲಾ ಕಟ್ಟಿಕೊಂಡು ಕಿಳಿಮಾನೂರಿಗೆ ರಾಜವರ್ಮನೊಂದಿಗೆ ಹೊರಟೆ.

ಕಿಳಿಮಾನೂರಿನಲ್ಲಿ ನನಗೆ ಭವ್ಯ ಸ್ವಾಗತ. ನಮ್ಮೂರ ಪದ್ಧತಿಯಂತೆ ಹೆಂಗಸರೂ ಅನ್ನದ ಉಂಡೆಗಳನ್ನು ದೃಷ್ಟಿ ನಿವಾಳಿಸಿ ಎಸೆದರು. ಸೋದರಮಾವ ಬಾಗಿಲಿನಲ್ಲೇ ನನಗಾಗಿ ಕಾದಿದ್ದರು. ಅವರು ಸನ್ಯಾಸ ಸ್ವೀಕರಿಸಿದ್ದಾರೆಂದು ನನಗೆ ತಿಳಿದಿದ್ದರೂ ಅವರನ್ನು ನೋಡಿದಾಗ ಮನಸ್ಸಿನಲ್ಲಿ ತುಂಬಾ ಸಂಕಟವಾಯಿತು. ಗರಿಗರಿಯಾದ ಬಿಳಿಯ ಜರಿಪಂಚೆ, ಅಂಗವಸ್ತ್ರಗಳನ್ನು ಧರಿಸಿ ಠೀವಿಯಿಂದ ನಿಲ್ಲುತ್ತಿದ್ದ, ಅಯಸ್ಕಾಂತ ಶಕ್ತಿಯ ಕಣ್ಣಳುಳ್ಳ ನನ್ನ ಸೋದರಮಾವ ರಾಜರಾಜವರ್ಮ ಇವರೇ ಎಂದರೆ ನಂಬಲು ಸ್ವಲ್ಪ ಕಷ್ಟವೇ ಎನಿಸುವಂತಿದ್ದರು. ಆರಡಿಯ ಧೀಮಂತ ವ್ಯಕ್ತಿತ್ವ ಈಗ ಕುಗ್ಗಿತ್ತು, ಕಣ್ಣಳು ತೇಜೋಹೀನವಾಗಿತ್ತು. ಕಾಷಾಯ ಧರಿಸಿ, ಗಡ್ಡ ಬಿಟ್ಟಿದ್ದ ಅವರ ನಿಲುವೇ ಬೇರೆಯದಾಗಿ ಕಾಣುತ್ತಿತ್ತು. ಅವರ ಕಾಲಿಗೆ ಬಿದ್ದ ನನ್ನನ್ನು ಮೇಲೆತ್ತಿ ಆಲಂಗಿಸಿಕೊಂಡು ಒಳ ನಡೆದರು. 'ನೀನು ಬಂದದ್ದು ತುಂಬಾ ಸಂತಸವಾಯಿತು ಕೊಚ್ಚ್. ನಿನ್ನ ತಂದೆತಾಯಿಯರು ನಿನಗಾಗಿ ಬಹಳ ಕಾತರರಾಗಿ ಕಾಯುತ್ತಿದ್ದಾರೆ ಹೋಗಿ ನೋಡು' ಎಂದರು.

ನನ್ನ ತಂದೆಯವರ ಕಾಲಿಗೆ ಪೊಡಮಟ್ಟಾಗ ಅವರು ನನ್ನನ್ನು ಆಶೀರ್ವದಿಸಿ 'ತುಂಬಾ ಹೆಸರು ಮಾಡಿದ್ದೀಯಂತಲ್ಲ ರವಿ! ಸಂತೋಷ. ಯಾವ ಕಲೆಯನ್ನು ಸಾಧಿಸಬೇಕಾದರೂ ತಾದ್ಯಾತ್ಮ ತುಂಬಾ ಮುಖ್ಯ. ಶ್ರದ್ಧೆ, ಪರಿಶ್ರಮ ಅಗತ್ಯ. ನಿನಗವೆಲ್ಲಾ ಇರುವುದರಿಂದಲೇ ನೀನು ಪ್ರವರ್ಧಮಾನಕ್ಕೆ ಬಂದಿದ್ದು. ನಡೆ, ಅಮ್ಮನನ್ನು ನೋಡಿ ಬಾ' ಎಂದರು. ಪೂಜಾಗೃಹದಲ್ಲಿದ್ದ ಅಮ್ಮ ನನ್ನನ್ನು ನೋಡಿ ಬಾಚಿ ತಬ್ಬಿಕೊಂಡಳು. 'ತುಂಬಾ ಇಳಿದು ಹೋಗಿದ್ದೀಯಲ್ಲಾ ಕೊಚ್ಚ್. ಕಾಲಕಾಲಕ್ಕೆ ಊಟತಿಂಡಿ ಮಾಡದೆ ದೇಹ ದಂಡಿಸುತ್ತಾ ನಿನ್ನ ಕಲೆಯನ್ನು ಬೆಳೆಸಿಕೊಳ್ಳುತ್ತಿದ್ದೀಯಾ?' ಎಂದು